ಕಥೆ

ಎಂದ ಮಿತ್ರ ಚಂದ್ರ ಮೋಹನ ಮಾತು ಕೇಳಿ ಹಳೆಯ ನೆನಪುಗಳಲ್ಲಿ ಕಳೆದೇ ಹೋಗಿದ್ದ ಶ್ರೀನಿಧಿ ಮತ್ತೆ ಅದೇ ಮಾತನ್ನು ಚಂದ್ರ ಮೋಹನ ಪುನರುಚ್ಚರಿಸಿದಾಗಲೇ ವಾಸ್ತವಕ್ಕೆ ಬಂದಿದ್ದು.

'ಓಹ್ ಸೂಪರ್. ಮೋಹನಾ ಆಸ್ಟ್ರೇಲಿಯಾಗೆ ಕಂಪನಿ ವತಿಯಿಂದ ಹೋಗ್ತಾ ಇದ್ದೀ ಆದ್ದರಿಂದ ನಮ್ಮ ಕಂಪನಿಯ ಕ್ಲೈಂಟ್ಸ್ ಎಲ್ಲಾ ವ್ಯವಸ್ಥೆ ಮಾಡಿರ್ತಾರೆ. ಅಲ್ಲಿ ಆರು ತಿಂಗಳು ಇರ್ಬೇಕಲ್ವಾ ನೀನು? ಡೋಂಟ್ ವರಿ. ಅಲ್ಲಿರುವ ನಮ್ಮ ಫ್ರೆಂಡ್ ಕ್ಯಾಥರೀನ್ ನಿನಗೆ ಇಡೀ ಆಸ್ಟ್ರೇಲಿಯಾ ಪರಿಚಯಿಸ್ತಾಳೆ.'

ಪರಿಚಯವೊಂದು ಸ್ನೇಹವಾಗಲು ಈ ಒಡನಾಟ ಸಾಕಾದರೂ ಆ ಸ್ನೇಹವೇ ಆಪ್ತವೆನ್ನಿಸಿ ಸಲುಗೆಯಾಗಲು ಬೇಕಾದ ಸಂಪರ್ಕಕ್ಕೆ ಅವರ ನಡುವೆ ಬಿಡುವಾದಾಗಲೆಲ್ಲಾ ಮಾತು, ಆಗಾಗ ಅಕ್ಷರದಲ್ಲಿ ಒಡಮೂಡುವ ಸಂಭಾಷಣೆ, ಕಾಯುವಿಕೆ, ತಹತಹ, ಹುಸಿ ಮುನಿಸು, ತುಸು ಜಗಳಗಳೆಲ್ಲಾ ಅತ್ಯಂತ ಖಾಸಗಿ. ಇದನ್ನೆಲ್ಲಾ ಚಂದ್ರ ಮೋಹನ ಗೆಳೆಯ ಶ್ರೀನಿಧಿಗೆ ಹೇಳಿರಲಿಲ್ಲ. ಕಂಪನಿಯ ಪ್ರಾಜೆಕ್ಟ್ ಮೇಲೆ ಆಸ್ಟ್ರೇಲಿಯಾಗೆ ಬಂದಿದ್ದು ಕೇವಲ ಆರು ತಿಂಗಳ ಕಾಲಾವಧಿಗೆ ಆಗಿದ್ದರೂ ಕ್ಯಾಥರೀನ್‌ಳನ್ನು ತುಂಬಾ ಹಚ್ಚಿಕೊಂಡಿದ್ದ ಚಂದ್ರ ಮೋಹನ ಮತ್ತೊಂದು ಆರು ತಿಂಗಳ ಅವಧಿಯನ್ನು ಕೋರಿ ವೀಸಾ ವಿಸ್ತರಿಸಿಕೊಂಡಿದ್ದ. ಆಗೆಲ್ಲಾ ಕ್ಯಾಥರೀನ್ ಜೊತೆಗೆ ಆಸ್ಟ್ರೇಲಿಯಾದ ಮೂಲೆ ಮೂಲೆ ತಿರುಗಿ, ಡೇಟಿಂಗ್ ನೆಪದಲ್ಲಿ ಅವಳೊಂದಿಗೆ ಬೆರೆತು ಹೊಸ ಜಗತ್ತನ್ನೇ ಕಂಡಿದ್ದ ಅವನಿಗೆ ಕ್ಯಾಥರೀನ್ ಜೊತೆ ಮದುವೆಯಾಗಿ ಭಾರತಕ್ಕೇ ಕರೆತರುವ ಆಸೆ ಹುಟ್ಟಿತ್ತು.

ಆದರೆ ಇದನ್ನೆಲ್ಲಾ ಶ್ರೀನಿಧಿಯೊಂದಿಗೆ ಹಂಚಿಕೊಳ್ಳದೇ ಕ್ಯಾಥರೀನ್‌ಗೆ ಸಮಾಧಾನ ಸಿಗುವಂತಿರಲಿಲ್ಲ. ಹಾಗಾಗಿಯೇ ತನ್ನ ಮೋಹನನ ಒಡನಾಟ, ಮಾತು ಕತೆ ಆಟ... ಎಲ್ಲಾ ವಿವರಗಳನ್ನೂ ಆಗಾಗ ಕರೆ ಮಾಡಿ ಹೇಳುತ್ತಲೇ ಇದ್ದಳು. ಇವತ್ತು ಅವಳ ಬದುಕಿನ ಮಹತ್ವದ ದಿನ. ಅವಳೂ ಚಂದ್ರ ಮೋಹನನೂ ಸೇರಿ ಅಂತಿಮ ತೀರ್ಮಾನ ತಗೊಳ್ಳುವ ಸುಮುಹೂರ್ತ. ಚಂದ್ರ ಮೋಹನನಿಗೆ ಇದು ತನ್ನ ತೀರಾ ಹೊಸದೇ ಅನ್ನಿಸುವ ಹುಟ್ಟುಹಬ್ಬ. ಆದರೆ ಅವತ್ತೇ ಕ್ಯಾಥರೀನ್‌ಗೆ ಜ್ವರ, ಬಳಲಿಕೆ ಸುಸ್ತು. ಅದೇ ಬಳಲಿದ ದನಿಯಲ್ಲಿ 'ಏಯ್ ನ್ಯಾಡಿ ನಿನ್ನೊತೆ ತುಂಬಾ ಮಾತಾಡ್ಬೇಕು ಕಣೋ' ಅಂತ ಕರೆ ಮಾಡಿದ್ದು ಅವಳೇ. ಅವಳ ಮಾತು ಕೇಳಲು ಸಂಜೆ ಮನೆಗೆ ಬಂದವನೇ ವೀಡಿಯೋ ಕರೆ ಮಾಡಿದ ನಿಧಿಗೆ ತುಸು ದಣಿದಂತಿದ್ದ ಕ್ಯಾಥರೀನ್ ಕಂಡು ಕಳವಳವಾಯ್ತು. ಅವಳ ದೈಹಿಕ ದಣಿವ ಮರೆಸುವಷ್ಟು ಮನೋಹರವಾದ ಮಾತು, ತನ್ನ ಗೆಳೆಯ ಮೋಹನ ಮತ್ತು ಕ್ಯಾಟಿಯ ನಡುವೆ ಅರಳಿದ್ದ ಪ್ರೇಮದ ಸಂಗತಿಗಳನ್ನೆಲ್ಲಾ ಸವಿವರವಾಗಿ ಕೇಳಿಸಿಕೊಳ್ಳುತ್ತಾ ಮುದಗೊಂಡಿದ್ದ. ಅವನೊಂದಿಗೆ ಮಾತಾಡುತ್ತಲೇ ತನ್ನ ಉಡುಪು ಬದಲಾಯಿಸಿದ ಕ್ಯಾಥರೀನ್ ಆ ಹೊತ್ತಿನಲ್ಲಿ ಮನೆಯ ಕರೆಗಂಟೆ ದನಿ ಕೇಳಿ ಗಲಿಬಿಲಿಗೊಂಡಿದ್ದಳು. ಮೋಹನನೊಂದಿಗೆ ಡಿನ್ನರ್‌ಗೆ ಹೋಗಲೆಂದು ಸಿದ್ಧವಾಗುತ್ತಾ, ಪಾರ್ಟಿ ಗೌನಿನಲ್ಲಿ ಕೈ ತೂರಿಸುತ್ತಲೇ ಬಾಗಿಲು ತೆಗೆದಾಗ ಒಳ ಬಂದಿದ್ದು ಅವಳ ಮೂನ್ ಯಾನೇ ಚಂದ್ರ ಮೋಹನ! ತುಸು ಕುಡಿದು ರಂಗಾಗಿ ಕ್ಯಾಥರೀನ್‌ಳ ಮನೆಗೆ ಬಂದಿದ್ದ ಮೋಹನನಲ್ಲಿ ಯಾವುದೋ ಆಮೋದ ಇತ್ತು. ಅವ ಒಳ ಬಂದವನೇ ವೀಡಿಯೋ ಸ್ಕ್ರೀನ್‌ನಲ್ಲಿ ಶ್ರೀನಿಧಿಯ ಮುಖ ಕಂಡು, ಕ್ಯಾಥರೀನ್ ಇವನ ಕಣ್ಣೆದುರು ತನ್ನ ಉಡುಪು ಬದಲಾಯಿಸಿದ್ದಾಳೆ ಎಂದೇ ಕನಲಿ ಕ್ರುದ್ಧನಾದ!

"ಕಂಗ್ರಾಟ್ಸ್ ಕಣೋ ಮೋಹ್ನಾ. ಕಂಗ್ರಾಟ್ಸ್ ಟು ಬೋತ್ ಆಫ್ ಯೂ. ಈಗ ತಾನೇ ಕ್ಯಾಟಿ 'ವಿ ಆರ್ ಇನ್ ಲವ್' ಅಂದ್ಲು. ನನಗೆಷ್ಟು ಖುಷಿ ಆಗ್ತಿದೆ ಗೊತ್ತಾ? ಯಾಹೂ..."

"ಹೂಂ. ಅವಳು ನಿನ್ನೆದುರೇ ಬಟ್ಟೆ ಬದಲಾಯಿಸ್ತಿದ್ದರೆ ಖುಷಿಯಾಗದೇ ಇನ್ನೇನಾಗುತ್ತೆ!? ಬ್ಲಡೀ ಬಿಚ್. ನನ್ನೊತೆ ಲವ್ ಅಂತೆ, ಇವನೊತೆ ಸರಸ... ನೀವಿಬ್ರೂ ನನ್ನನ್ನೇನು ಗಾಂಡೂ ಅದ್ಕೊಂಡಿದ್ದೀರಾ?" ಎಂದವನೇ ತಿರುಗಿ ಕ್ಯಾಥರೀನ್‌ಳನ್ನು ಗಟ್ಟಿಯಾಗಿ ತಬ್ಬಿಕೊಂಡ.

"ಮೋಹನಾ ದುಡುಕಬೇಡ. ನನ್ ಮಾತು ಕೇಳು" ಅಂತ ಶ್ರೀನಿಧಿ ಕಿರುಚುತ್ತಿದ್ದಾಗಲೇ, ಕೊಸರಾಡಿದರೂ ಬಿಕ್ಕಿ ಬಿಕ್ಕಿ ಅಳುತ್ತಿದ್ದ ಕ್ಯಾಥರೀನ್ ತನ್ನ ದಣಿದ ದೇಹವನ್ನ ನೆಲಕ್ಕೆ ಚೆಲ್ಲಿದಳು. ಮೋಹನ ಮೃಗದಂತೆ ಮುಗಿಬಿದ್ದ... ಶ್ರೀನಿಧಿ ಗದ್ಗದಿತನಾಗಿ ಲ್ಯಾಪ್‌ಟಾಪ್ ಮುಚ್ಚಿದ. ●